**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ**

**ಸಿ.ಸಿ.ನಂ.12724/2008**

ಫಿರ್ಯಾದಿದಾರರ ಹೆಸರುಃ ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ

ಮಹಾಲಕ್ಷ್ಮಿ ಲೇ ಔಟ್ ಆರಕ್ಷಕ ಠಾಣೆ

ವಿರುದ್ಧ

ಆರೋಪಿತರ ಹೆಸರುಃ **2. ಜಿ. ರಾಮಕೃಷ್ಣ**

3. ಶ್ರೀ ಎನ್. ರಂಗನಾಥ್

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆ</u>**

**ಪ್ರಶ್ನೆ-1:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರಾದ ನೀವು ಅವರಿಗೆ ಪರಿಚಯಸ್ಥರೆಂದು, 2 ರಿಂದ 5 ನೇ ಆರೋಪಿಗಳಾದ ನೀವು ದಯಾಳನ್ ಗೃಹ ನಿರ್ಮಾಣ ಸಂಘದ ನಿರ್ದೇಶಕರಾಗಿದ್ದಿರೆಂದು, ಶ್ರೀಗಂಧದ ಕಾವಲ್ ನಲ್ಲಿಯ ಸರ್ವೇ ನಂ.33/3 ರಲ್ಲಿ 15 ಎಕರೆ 14 ಗುಂಟೆ ಜಮೀನಿನಲ್ಲಿ 30X40 ಅಡಿ ನಿವೇಶನವನ್ನು 88,000/- ರೂಪಾಯಿಗಳಿಗೆ ಕೊಡುವುದಾಗಿ ಹೇಳಿ ಸೀತಾರಾಮ್ ಅವರಿಂದ ನೀವು ಸಂಪೂರ್ಣ ಹಣವನ್ನು ಪಡೆದಿರುವಿರೆಂದು ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-2:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಆರೋಪಿತರಾದ ನೀವು ಅವರಿಂದ ನಿವೇಶನದ ಸಂಪೂರ್ಣ ಹಣ ಪಡೆದರು ಸಹ ನಿವೇಶನವನ್ನು ಮಂಜೂರು ಮಾಡದೇ, 2 ನೇ ಆರೋಪಿಯಾದ ನೀನು ಅಭಿವೃದ್ಧಿಗಾಗಿ 2 ಲಕ್ಷ ರೂಪಾಯಿ ಹೆಚ್ಚು ಹಣ ಕೊಡಬೇಕೆಂದು ನೀವು ಒತ್ತಾಯಿಸಿದೆ ಎಂದು ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-3:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಆರೋಪಿತರಾದ ನೀವು ಸೀತಾರಾಮ್ ಅವರಿಗೆ ದಿನಾಂಕ 14.06.2006 ರಂದು ಮಂಜೂರಾತಿ ಪತ್ರದಲ್ಲಿ ತಿಳಿಸಿದ ನಿವೇಶನ ಸಂಖ್ಯೆ 8 ಕ್ಕೆ ತಂತಿ ಬೇಲಿಯನ್ನು ಹಾಕಿದರೆಂದು ಆದರೆ ಅದನ್ನು ನೀವು ನಾಶಗೊಳಿಸಿ, ಆ ನಿವೇಶನವನ್ನು ಬೇರೆಯವರಿಗೆ ಮಂಜೂರು ಮಾಡಿದಿರೆಂದು, ಆದರೆ ತಮಗೆ ಬೇರೆ ಯಾವುದೇ ನಿವೇಶನವನ್ನು ನೊಂದಾಯಿಸಿ ಕೊಡಲಿಲ್ಲವೆಂದು ಆದುದರಿಂದ ನಿಮ್ಮ ವಿರುದ್ದ ಸಹಕಾರ ಸಂಘಗಳ ಉಪ ನಿಬಂಧಕರ ಮುಂದೆ ದೂರು ಸಲ್ಲಿಸಿದ್ದಾಗಿ ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-4:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಅವರು ಸಹಕಾರ ಸಂಘಗಳ ಉಪ ನಿಬಂಧಕರ ಮುಂದೆ ಹಾಜರಾಗಲು ಹೋಗುತ್ತಿದ್ದಾಗ ಆರೋಪಿತರಾದ ನೀವು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿ, ಯಾವುದೇ ನಿವೇಶನವನ್ನು ಮಂಜೂರು ಮಾಡುವುದಿಲ್ಲವೆಂದು ಹೇಳಿದ್ದರಿಂದ ದೂರನ್ನು ಸಲ್ಲಿಸಿದ್ದಾಗಿ ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-5:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಆರೋಪಿತರಾದ ನೀವು ಸೊಸೈಟಿಯ ಸದಸ್ಯರಿಗಾಗಿಯೇ ಜಮೀನು ಖರೀದಿಸಿ ನಿವೇಶನಗಳನ್ನಾಗಿ ಪರಿವರ್ತಿಸಿ, ಅವುಗಳನ್ನು ಕಾನೂನು ಬಾಹಿರವಾಗಿ ನಿಮ್ಮ ಸಂಬಂಧಿಕರಿಗೆ ಮತ್ತು ಸೊಸೈಟಿಯ ಸದಸ್ಯರಲ್ಲದವರಿಗೆ ಮಾರಾಟ ಮಾಡಿ ವಂಚನೆ ಮಾಡಿರುವರೆಂದು ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-6:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಆರೋಪಿತರಾದ ನೀವು ಸೊಸೈಟಿಯ ಸದಸ್ಯರಿಗಾಗಿಯೇ ಜಮೀನು ಖರೀದಿಸಿ ನಿವೇಶನಗಳನ್ನಾಗಿ ಪರಿವರ್ತಿಸಿ, ರಿಯಲ್ ಎಸ್ಟೇಟ್ ಮಾಡುವ ಉದ್ದೇಶದಿಂದ ಸದರಿ ನಿವೇಶನಗಳನ್ನು 2 ನೇ ಆರೋಪಿಯಾದ ನೀನು ನಿಮ್ಮ ಪತ್ನಿ ಮತ್ತು ಮಕ್ಕಳಿಗೆ ಅವುಗಳನ್ನು ಕಾನೂನು ಬಾಹಿರವಾಗಿ ಮಾರಾಟ ಮಾಡಿ ವಂಚನೆ ಮಾಡಿರುವರೆಂದು ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-7:-** ಅ.ಸಾ.2 ನರಸೇಗೌಡ ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2006 ರ ಜನವರಿ ಕೊನೆಯ ವಾರದಲ್ಲಿ ತಾವು ಮತ್ತು ಫಿರ್ಯಾದಿ ಖನಿಜ ಭವನದ ಹತ್ತಿರ ಹೋಗಿದ್ದೇವೆಂದು , ಅಲ್ಲಿ 2 ಮತ್ತು 3 ನೇ ಆರೋಪಿತರು ಮತ್ತು ಅವರೊಂದಿಗೆ ನಾಲ್ಕಾರು ಜನ ಇದ್ದರೆಂದು, 2 ನೇ ಆರೋಪಿಯು ಏನು ದಾಖಲೆಗಳನ್ನು ತಂದಿರುವೆ ಎಂದು ಕೇಳಿದಾಗ ಫಿರ್ಯಾದಿ ದಾಖಲೆಗಳನ್ನು 2 ನೇ ಆರೋಪಿಗೆ ಕೊಟ್ಟರೆಂದು ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-8:-** ಅ.ಸಾ.2 ನರಸೇಗೌಡ ಅವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ 2 ನೇ ಆರೋಪಿಯಾದ ನೀನು ಸೈಟಿಗಾಗಿ 2 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಫಿರ್ಯಾದಿಗೆ ಕೇಳಿದೆ ಎಂದು ಅದಕ್ಕೆ ಫಿರ್ಯಾದಿಯು ಕಾನೂನು ಬಾಹಿರವಾಗಿ ಕೇಳುತ್ತಿರುವ 2 ಲಕ್ಷ ರೂಪಾಯಿಗಳನ್ನು ಕೊಡುವುದಿಲ್ಲವೆಂದು ಹೇಳಿದಾಗ ನೀನು ದಾಖಲೆಗಳನ್ನು ಫಿರ್ಯಾದಿಗೆ ವಾಪಸ್ಸು ಕೊಟ್ಟೆ ಎಂದು ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-9:-** ಪ್ರಕರಣದ ಬಗ್ಗೆ ನೀನು ಏನಾದರೂ ಹೇಳುವುದೆಯಾ ?

**ಉತ್ತರಃ**

**ಪ್ರಶ್ನೆ-10:-** ನಿನ್ನ ಪರವಾಗಿ ಸಾಕ್ಷಿದಾರರನ್ನು ವಿಚಾರಣೆ ಮಾಡುತ್ತೀಯಾ ಅಥವಾ ದಾಖಲೆಗಳನ್ನು ಹಾಜರುಪಡಿಸುತ್ತೀಯಾ?

**ಉತ್ತರಃ**

ಮೇಲಿನ ಎಲ್ಲಾ ಪ್ರಶ್ನೆಗಳನ್ನು ಓದಿ ಹೇಳಿ ವಿವರಿಸಿ ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

3 ನೇ ಎ.ಸಿ.ಎಂ.ಎಂ. ನ್ಯಾಯಾಲಯ,

ದಿನಾಂಕ 24.03.2023. ಬೆಂಗಳೂರು.

**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ**

**ಸಿ.ಸಿ.ನಂ.12724/2008**

ಫಿರ್ಯಾದಿದಾರರ ಹೆಸರುಃ ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ

ಮಹಾಲಕ್ಷ್ಮಿ ಲೇ ಔಟ್ ಆರಕ್ಷಕ ಠಾಣೆ

ವಿರುದ್ಧ

ಆರೋಪಿತರ ಹೆಸರುಃ 2. ಜಿ. ರಾಮಕೃಷ್ಣ

**3. ಶ್ರೀ ಎನ್. ರಂಗನಾಥ್**

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆ</u>**

**ಪ್ರಶ್ನೆ-1:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರಾದ ನೀವು ಅವರಿಗೆ ಪರಿಚಯಸ್ಥರೆಂದು, 2 ರಿಂದ 5 ನೇ ಆರೋಪಿಗಳಾದ ನೀವು ದಯಾಳನ್ ಗೃಹ ನಿರ್ಮಾಣ ಸಂಘದ ನಿರ್ದೇಶಕರಾಗಿದ್ದಿರೆಂದು, ಶ್ರೀಗಂಧದ ಕಾವಲ್ ನಲ್ಲಿಯ ಸರ್ವೇ ನಂ.33/3 ರಲ್ಲಿ 15 ಎಕರೆ 14 ಗುಂಟೆ ಜಮೀನಿನಲ್ಲಿ 30X40 ಅಡಿ ನಿವೇಶನವನ್ನು 88,000/- ರೂಪಾಯಿಗಳಿಗೆ ಕೊಡುವುದಾಗಿ ಹೇಳಿ ಸೀತಾರಾಮ್ ಅವರಿಂದ ನೀವು ಸಂಪೂರ್ಣ ಹಣವನ್ನು ಪಡೆದಿರುವಿರೆಂದು ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-2:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಆರೋಪಿತರಾದ ನೀವು ಅವರಿಂದ ನಿವೇಶನದ ಸಂಪೂರ್ಣ ಹಣ ಪಡೆದರು ಸಹ ನಿವೇಶನವನ್ನು ಮಂಜೂರು ಮಾಡಿಲ್ಲವೆಂದು ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-3:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಆರೋಪಿತರಾದ ನೀವು ಸೀತಾರಾಮ್ ಅವರಿಗೆ ದಿನಾಂಕ 14.06.2006 ರಂದು ಮಂಜೂರಾತಿ ಪತ್ರದಲ್ಲಿ ತಿಳಿಸಿದ ನಿವೇಶನ ಸಂಖ್ಯೆ 8 ಕ್ಕೆ ತಂತಿ ಬೇಲಿಯನ್ನು ಹಾಕಿದರೆಂದು

ಆದರೆ ಅದನ್ನು ನೀವು ನಾಶಗೊಳಿಸಿ, ಆ ನಿವೇಶನವನ್ನು ಬೇರೆಯವರಿಗೆ ಮಂಜೂರು ಮಾಡಿದಿರೆಂದು, ಆದರೆ ತಮಗೆ ಬೇರೆ ಯಾವುದೇ ನಿವೇಶನವನ್ನು ನೊಂದಾಯಿಸಿ ಕೊಡಲಿಲ್ಲವೆಂದು ಆದುದರಿಂದ ನಿಮ್ಮ ವಿರುದ್ದ ಸಹಕಾರ ಸಂಘಗಳ ಉಪ ನಿಬಂಧಕರ ಮುಂದೆ ದೂರು ಸಲ್ಲಿಸಿದ್ದಾಗಿ ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-4:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಅವರು ಸಹಕಾರ ಸಂಘಗಳ ಉಪ ನಿಬಂಧಕರ ಮುಂದೆ ಹಾಜರಾಗಲು ಹೋಗುತ್ತಿದ್ದಾಗ ಆರೋಪಿತರಾದ ನೀವು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿ, ಯಾವುದೇ ನಿವೇಶನವನ್ನು ಮಂಜೂರು ಮಾಡುವುದಿಲ್ಲವೆಂದು ಹೇಳಿದ್ದರಿಂದ ದೂರನ್ನು ಸಲ್ಲಿಸಿದ್ದಾಗಿ ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-5:-** ಅ.ಸಾ.1 ಸೀತಾರಾಮ್ ಅವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಆರೋಪಿತರಾದ ನೀವು ಸೊಸೈಟಿಯ ಸದಸ್ಯರಿಗಾಗಿಯೇ ಜಮೀನು ಖರೀದಿಸಿ ನಿವೇಶನಗಳನ್ನಾಗಿ ಪರಿವರ್ತಿಸಿ, ಅವುಗಳನ್ನು ಕಾನೂನು ಬಾಹಿರವಾಗಿ ನಿಮ್ಮ ಸಂಬಂಧಿಕರಿಗೆ ಮತ್ತು ಸೊಸೈಟಿಯ ಸದಸ್ಯರಲ್ಲದವರಿಗೆ ಮಾರಾಟ ಮಾಡಿ ವಂಚನೆ ಮಾಡಿರುವರೆಂದು ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-6:-** ಅ.ಸಾ.2 ನರಸೇಗೌಡ ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2006 ರ ಜನವರಿ ಕೊನೆಯ ವಾರದಲ್ಲಿ ತಾವು ಮತ್ತು ಫಿರ್ಯಾದಿ ಖನಿಜ ಭವನದ ಹತ್ತಿರ ಹೋಗಿದ್ದೇವೆಂದು , ಅಲ್ಲಿ 2 ಮತ್ತು 3 ನೇ ಆರೋಪಿತರು ಮತ್ತು ಅವರೊಂದಿಗೆ ನಾಲ್ಕಾರು ಜನ ಇದ್ದರೆಂದು, 2 ನೇ ಆರೋಪಿಯು ಏನು ದಾಖಲೆಗಳನ್ನು ತಂದಿರುವೆ ಎಂದು ಕೇಳಿದಾಗ ಫಿರ್ಯಾದಿ ದಾಖಲೆಗಳನ್ನು 2 ನೇ ಆರೋಪಿಗೆ ಕೊಟ್ಟರೆಂದು ಸಾಕ್ಷಿ ನುಡಿದಿದ್ದಾರೆ. ಈ ಬಗ್ಗೆ ನಿಮ್ಮ ಸಮಜಾಯಿಷಿ ಏನು ?

**ಉತ್ತರಃ**

**ಪ್ರಶ್ನೆ-7:-** ಪ್ರಕರಣದ ಬಗ್ಗೆ ನೀನು ಏನಾದರೂ ಹೇಳುವುದೆಯಾ?

**ಉತ್ತರಃ**

**ಪ್ರಶ್ನೆ-8:-** ನಿನ್ನ ಪರವಾಗಿ ಸಾಕ್ಷಿದಾರರನ್ನು ವಿಚಾರಣೆ ಮಾಡುತ್ತೀಯಾ ಅಥವಾ ದಾಖಲೆಗಳನ್ನು ಹಾಜರುಪಡಿಸುತ್ತೀಯಾ?

**ಉತ್ತರಃ**

ಮೇಲಿನ ಎಲ್ಲಾ ಪ್ರಶ್ನೆಗಳನ್ನು ಓದಿ ಹೇಳಿ ವಿವರಿಸಿ ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

3 ನೇ ಎ.ಸಿ.ಎಂ.ಎಂ. ನ್ಯಾಯಾಲಯ,

ದಿನಾಂಕ 24.03.2023. ಬೆಂಗಳೂರು.